

‘ಹೊಸದಾಗಿ ರಿಕ್ರೂಟ್ ಆದ ಟ್ರೈನಿಗಳೆಲ್ಲ ರಿಪೋರ್ಟ್ ಮಾಡಿಕೊಂಡ್ರಾ, ಇಬ್ಬರು ಪ್ರೊಬೆಷನರಿಗಳು ಬರಬೇಕಿತ್ತಲ್ಲ, ಅವರು ಯಾವಾಗ ಬರ್ತಾರಂತೆ?...’

ಎರಡು ತಿಂಗಳ ವಿದೇಶ ಪ್ರವಾಸ ಮುಗಿಸಿ ಆಫೀಸಿಗೆ ಬಂದ ಸಂಪಾದಕರು, ನ್ಯೂಸ್ ಎಡಿಟರ್ ಕಡೆ ನೋಡುತ್ತ ಕೇಳಿದರು.

ಉತ್ತರಕ್ಕೆ ಕಾಯದೆ ಮತ್ತೆ ಅವರೇ, ‘ಹೊಸಬರೆಲ್ಲ ಹೇಗಿದ್ದಾರೆ? ಕರೆಂಟ್ ಅಫೇರ್ಸ್‌ಗೆ ಅಪ್‌ಡೇಟ್ ಆಗಿದ್ದಾರಾ? ಹಿಸ್ಟರಿ, ಲಿಟರೇಚರ್, ಸೈನ್ಸ್, ಪಾಲಿಟಿಕ್ಸ್, ಥಿಯೇಟರ್, ಸಿನಿಮಾ ಬಗ್ಗೆ ಮಿನಿಮಮ್ ನಾಲೆಡ್ಜ್ ಇದೆಯಾ? ಯೂನಿವರ್ಸಿಟಿಯಲ್ಲೇ ಎಲ್ಲಾ ಕಲಿತಿದ್ದೀವಿ. ಇಲ್ಲಿ ಹೊಸದಾಗಿ ಕಲಿಯೋದೇನೂ ಇಲ್ಲ ಅನ್ನೋ ಮೆಂಟಾಲಿಟಿಯವರು ಯಾರಾದರೂ ಇದ್ರೆ ಅವರಿಗೆ ಹೇಳಿ ಬಿಡಿ. ಅಂಥವರು ನಮಗೆ ಬೇಕಾಗಿಲ್ಲ ಅಂತ. ಇನ್ನೂ ಒಳ್ಳೆಯ ಕೆಲಸ ಸಿಗೋವರೆಗೆ ಇಲ್ಲಿ ಟೈಂಪಾಸ್‌ಗೆ ಅಂತ ಬಂದಿರೋರು ಯಾರಾದರೂ ಇದ್ದರೆ ಅವರಿಗೆ ಮನೆಗೆ ಹೋಗಿ ಅಂತ ನೀವೇ ಹೇಳಿ ಬಿಡಿ...

ಮುಂದಿನ ಹತ್ತು ವರ್ಷಗಳಲ್ಲಿ ಹೊಸಬರಲ್ಲಿ ಒಬ್ಬಿಬ್ಬರಾದರೂ ಟಾಪ್‌ಟೆನ್ ಪೊಸಿಷನ್‌ಗೆ ಬರಬೇಕು ಅಂತ ನಾನು ಎಕ್ಸ್‌ಪೆಕ್ಟ್ ಮಾಡ್ತೀನಿ...’ ಅಂತ ಸಂಪಾದಕರು ಹೇಳಿದನ್ನು ಕೇಳಿ ಮಧ್ಯಾಹ್ನದ ಮೀಟಿಂಗ್‌ನಲ್ಲಿದ್ದ ಸೀನಿಯರ್ಸ್‌ಗಳಿಗೆ ಆಶ್ಚರ್ಯ.

‘ನಮಗೆ ಬೇಕಿರೋದು ಬರೀ ಮ್ಯಾನ್ ಪವರ್ ಅಲ್ಲ. ಸೆನ್ಸಿಬಲ್ ಅಂಡ್ ಕಮಿಟೆಡ್ ವರ್ಕ್‌ಫೋರ್ಸ್. ಈಗಿನ ಜರ್ನಲಿಸ್ಟ್‌ಗಳಿಗೆ ಪಾಲಿಟಿಕ್ಸ್ ಬಗ್ಗೆ ಇಂಟರೆಸ್ಟ್ ಜಾಸ್ತಿ. ಡೆಸ್ಕಲ್ಲಿ ಕೂತು ಕೆಲಸ ಮಾಡೋಕೆ ರೆಡಿ ಇರಲ್ಲ. ಇನ್ನು ಮುಂದೆ ಪೊಲಿಟಿಕಲ್ ಸ್ಟೋರಿಗಳಿಗೆ ಹೆಚ್ಚು ಸ್ಪೇಸ್ ಸಿಗಲ್ಲ. ಡೆವಲಪ್‌ಮೆಂಟ್ ಅಂಡ್ ಅನಲಿಟಿಕಲ್ ಅಪ್ರೂಚ್‌ಗೆ ಹೆಚ್ಚು ಸ್ಪೇಸ್ ಕೊಡಬೇಕು ಅಂತ ಡಿಸೈಡ್ ಮಾಡಿದ್ದೀನಿ. ಸೊಸೈಟಿ ಬಗ್ಗೆ ಕನ್ಸರ್ನ್ ಇರೋರು ಬೇಕು. ಹೊಸಬರಲ್ಲಿ ಅಂಥವರು ಎಷ್ಟು ಜನ ಸಿಗ್ತಾರೆ...’ ಎನ್ನುತ್ತ ನ್ಯೂಸ್ ಎಡಿಟರ್ ಮುಖ ನೋಡಿದರು.

‘ಟ್ರೈನಿಗಳಲ್ಲಿ ಮೂರ್ನಾಲ್ಕು ಜನ ಪರವಾಗಿಲ್ಲ ಸಾರ್. ಪ್ರೊಬೆಷನರಿಗಳೂ ರಿಪೋರ್ಟ್